ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 09-04-2026:

ಪಾಟೀಸವಾಲುಃ ಆರೋಪಿ ಪರ ಶ್ರೀ ಡಿ ಎಂ ಪಿ ವಕೀಲರಿಂದಃ

ಸೋರ್ಸ್ ವರದಿಯನ್ನು ತಯಾರಿಸುವುದು ಆರೋಪಿತರ ಮೇಲೆ ದಾಳಿ ನಡೆಸಬಹುದೋ ಇಲ್ಲವೋ ಎಂದು ತಿಳಿದುಕೊಳ್ಳಲು ಎಂದರೆ ಸಾಕ್ಷಿಯು ಆರೋಪಿತರು ತಮ್ಮ ಆದಾಯಕ್ಕಿಂತ ಜಾಸ್ತಿ ಆಸ್ತಿ ಹೊಂದಿದ್ದಾರೋ ಇಲ್ಲವೋ ಎಂದು ತಿಳಿದುಕೊಳ್ಳಲು ಎನ್ನುತ್ತಾರೆ. ನನಗೆ ಸೋರ್ಸ್ ವರದಿಯೊಂದಿಗೆ ಯಾವುದೇ ದಾಖಲೆಗಳನ್ನು ನೀಡಿರಲಿಲ್ಲ. ನಿಪಿ-81ರಲ್ಲೂ ಸೋರ್ಸ್ ವರದಿಯೊಂದಿಗೆ ಏನೇನು ದಾಖಲೆಗಳನ್ನು ಲಗತ್ತಿಸಿದ್ದರು ಎಂದು ಕಾಣಿಸಿಲ್ಲ ಎಂದರೆ ಸರಿ. ಪ್ರ.ವ.ವ. ದಾಖಲಿಸುವುದಕ್ಕಿಂತ ಮೊದಲು ಸೋರ್ಸ್ ವರದಿಯನ್ನು ತಯಾರಿಸಿದ ಅಧಿಕಾರಿಯ ಜೊತೆ ನಾನು ಚರ್ಚೆ ಮಾಡಲಿಲ್ಲ. ನನಗೆ ಸೋರ್ಸ್ ವರದಿಯನ್ನು ದಿನಾಂಕ 24-7-13ರಂದು ನೀಡಿರುತ್ತಾರೆ. ನಿಪಿ-1 ರಲ್ಲಿ ದಿನಾಂಕ 24-7-17 ಎಂದು ಇದೆ ಎಂದರೆ ಸಾಕ್ಷಿಯು ಪುಟ 4 ರಲ್ಲಿ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಪರಿಶೀಲಿಸಿರುವ ದಿನಾಂಕ ಹಾಕಿರುತ್ತಾರೆ, ಅದರಲ್ಲಿ 24-7-13 ಎಂದು ಇದೆ ಎನ್ನುತ್ತಾರೆ. ಸೋರ್ಸ್ ವರದಿ ತಯಾರಿಸಿದವರಲ್ಲಿ ನಾನು ಅದನ್ನು ಯಾವಾಗ ತಯಾರಿಸಿದ್ದೆಂದು ವಿಚಾರ ಮಾಡಿದ್ದೇನಾ ಎಂದರೆ ಸಾಕ್ಷಿಯು ವಿಚಾರಣೆ ಮಾಡಿಲ್ಲ ಆದರೆ ತಯಾರಿಸಿರುವುದು 24-7-13 ರಂದು ಎನ್ನುತ್ತಾರೆ. ನಿಪಿ-1 ರ ಪುಟ ಸಂಖ್ಯೆ 2 ರ ಆರೋಪಿತರು ಹೊಂದಿರುವ ನಿವೇಶನದಲ್ಲಿ ನಿರ್ಮಿಸಿರುವ ಮನೆಯ ವೆಚ್ಚ 40ಲಕ್ಷ ರೂಪಾಯಿ ಎಂದು ಕಾಣಿಸಿದೆ ಎಂದರೆ ನಿಜ. ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ಪಡೆದುಕೊಂಡಿದ್ದಾರಾ ಎಂದರೆ ಸಾಕ್ಷಿಯು ಅಂದಾಜು ಮೌಲ್ಯ ಮಾಡಿರುವುದು ಎನ್ನುತ್ತಾರೆ. ಪಿಡಬ್ಲ್ಯೂಡಿಯವರಲ್ಲಿ ನಿವೇಶನ ಸಂಖ್ಯೆ 453 ರಲ್ಲಿ ಕಟ್ಟಿರುವ ಮನೆಯ ವಿಸ್ತೀರ್ಣ ಎಷ್ಟು ಎಂದು ನಿಪಿ-1 ನ್ನು ತಯಾರಿಸುವ ಸಮಯದಲ್ಲಿ ದಾಖಲೆ ಪಡೆದಿರಲಿಲ್ಲ. ಅದರ ಮೌಲ್ಯ ಅಷ್ಟು ಎನ್ನುವ ಬಗ್ಗೆ ನಾನು ಪ್ರ.ವ.ವ. ತಯಾರಿಸುವ ಸಮಯದಲ್ಲಿ ಪರಿಶೀಲನೆ ಮಾಡಿದ್ದೇನಾ ಎಂದರೆ ಸಾಕ್ಷಿಯ ತನಿಖಾ ಸಮಯದಲ್ಲಿ ಮಾಡಿರುತ್ತೇನೆ ಎನ್ನುತ್ತಾರೆ. ಹಾಗೆಯೇ ನಿಪಿ-1 ರ ಪುಟ 3 ರಲ್ಲಿ ಅಂದಾಜು ಆದಾಯ ವಿವರದ ಕ್ರಮಸಂಖ್ಯೆ 3 ರಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಮತ್ತು ಅದರಲಿ ಏನೇನು ಬೆಳೆ ಬೆಳೆದಿದ್ದಾರೆ ಎಂಬ ಬಗ್ಗೆ ನಮೂದನೆ ಇಲ್ಲ ಎಂದರೆ ಸರಿ. ಪ್ರ.ವ.ವ. ತಯಾರಿಸುವುದಕ್ಕಿಂತ ಮೊದಲು ನಾನು ಆ ಬಗ್ಗೆ ವಿವರ ಕಲೆ ಹಾಕಿಲ್ಲ. ಪ್ರ.ವ.ವ. ತಯಾರಿಸುವುದಕ್ಕಿಂತ ಮೊದಲು ಆರೋಪಿತರ ಘೋಷಿತ ಆದಾಯ ಮತ್ತು ಆಸ್ತಿಯ ಬಗ್ಗೆ ನಾನು ಅವರ ಎಸಿಆರ್ ನ್ನು ಪರಿಶೀಲನೆ ಮಾಡಿಲ್ಲ.

2.ನಿಪಿ-1 ರಲ್ಲಿ ಪೊಲೀಸ್ ಅಧೀಕ್ಷಕರು ಸೋರ್ಸ್ ವರದಿಯ ಯಾವ ಅಂಶವನ್ನು ಒಪ್ಪಬಹುದು ಯಾವ ಅಂಶವನ್ನು ಒಪ್ಪಬಾರದು ಎಂದು ಕಾಣಿಸಿಲ್ಲ ಎಂದರೆ ಸಾಕ್ಷಿಯು ನಿಖರವಾಗಿ ಕಾಣಿಸಿಲ್ಲ ಆದರೆ ಒಪ್ಪಬಹುದು ಎಂದು ಹೇಳಿರುವುದರಿಂದ ಎಲ್ಲವನ್ನೂ ಒಪ್ಪಿರುತ್ತಾರೆ ಎಂದು ಅರ್ಥ ಎನ್ನುತ್ತಾರೆ. ನಾನು ಬೇಕಾದ ಮಾಹಿತಿ ಕಲೆಹಾಕದೆ ತನಿಖೆ ಮಾಡಿರುವುದರಿಂದ ನಾನು ನಡೆಸಿರುವ ತನಿಖೆ ಸರಿಯಲ್ಲ ಎಂದರೆ ಸರಿಯಲ್ಲ. ಪೊಲೀಸ್ ಅಧೀಕ್ಷಕರು ನನಗೆ ತನಿಖೆ ನಡೆಸಲು ನೀಡಿರುವ Authorization ಕಾನೂನು ಬದ್ಧವಾಗದಿರುವುದರಿಂದ ನಾನು ಮಾಡಿರುವ ತನಿಖೆಯು ಸಮಂಜಸವಲ್ಲ ಎಂದರೆ ಸರಿಯಲ್ಲ. ಪ್ರ.ವ.ವ. ದಾಖಲಿಸುವ ಮೊದಲು ನಾನು ಪೂರ್ವಭಾವಿ ತನಿಖೆ ನಡೆಸಿಲ್ಲ. ನಾನು ಸರಿಯಾಗಿ ಪೂರ್ವಭಾವಿ ತನಿಖೆ ನಡೆಸಿದ್ದರೆ ಅಲ್ಲಿ ಆರೋಪಿತರು ಆದಾಯಕ್ಕಿಂತ ಜಾಸ್ತಿ ಆಸ್ತಿ ಹೊಂದಿಲ್ಲ ಎನ್ನುವುದು ಕಂಡುಬರುತ್ತಿತ್ತು ಮತ್ತು ತನಿಖೆ ಮುಂದುವರೆಸುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ.

3.ಯಾವ ಯಾವ ವಸ್ತುಗಳ ಶೋಧನೆಗೆ ಸರ್ಚ್ ವಾರೆಂಟ್ ಬೇಕೆಂದು ನಿಪಿ-3 ರಲ್ಲಿ ಕಾಣಿಸಿಲ್ಲ ಎಂದರೆ ಸಾಕ್ಷಿಯು ನಾನು ನೀಡಿರುವ ಪತ್ರದಲ್ಲಿ ಕಾಣಿಸಿದ್ದೇನೆ, ನಿಪಿ-3 ರಲ್ಲಿ ಅದನ್ನು ನಿಖರವಾಗಿ ಕಾಣಿಸಿಲ್ಲ ಎನ್ನುತ್ತಾರೆ. ನಿಪಿ-3 ರ ಪ್ರಕಾರ ನನಗೆ ಇನ್ವೆಂಟರಿ ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

4.ದಾಳಿಗೆ ಹೋಗುವ ಸಮಯದಲ್ಲಿ ನಾನು ಅಕ್ಕಸಾಲಿಗರನ್ನು ಬಿಟ್ಟರೆ ಅಲ್ಲಿ ಕಂಡುಬರುವ ವಸ್ತುಗಳನ್ನು ಮೌಲ್ಯ ಮಾಡಲು ಅದಕ್ಕೆ ಸಂಬಂಧಪಟ್ಟ ಪರಿಣಿತರನ್ನು ನಾನು ಕರೆದುಕೊಂಡು ಹೋಗಿಲ್ಲ ಎಂದರೆ ಸರಿ. ನಿಪಿ-4 ರಲ್ಲಿ ಕಾಣಿಸಿದ ವಸ್ತುಗಳ ಬೆಲೆಯು ವರ್ಷದಿಂದ ವರ್ಷಕ್ಕೆ ಡೀಲರ್ ನಿಂದ ಡೀಲರ್ ಗೆ ಏಜೆಂಟ್ ನಿಂದ ಏಜೆಂಟ್ ಗೆ ವ್ಯತ್ಯಾಸವಾಗುತ್ತದೆ ಎಂದರೆ ನಿಜ. ಅದರಲ್ಲಿ ಕಾಣಿಸಿದ ವಸ್ತುಗಳನ್ನು ಯಾವ ವರ್ಷಕ್ಕೆ ಖರೀದಿಸಿದ್ದು ಎಂದು ಆಯಾಯ ವರ್ಷದ ಮೌಲ್ಯವನ್ನು ಕಾಣಿಸಿಲ್ಲ ಎಂದರೆ ಸಾಕ್ಷಿಯು ಯಾವ ವಸುತಗಳಿಗೆ ರಶೀದಿ ಸಿಕ್ಕಿದೆಯೋ ಅದರಂತೆ ಮೌಲ್ಯ ಕಾಣಿಸಿದ್ದೇನೆ, ರಶೀದಿ ಸಿಕ್ಕದ ವಸ್ತುಗಳಿಗೆ ಪಂಚರ ಅಭಿಪ್ರಾಯದಂತೆ ಅಂದಾಜು ಮೌಲ್ಯ ಕಾಣಿಸಿದ್ದೇನೆ ಎನ್ನುತ್ತಾರೆ. ಎಲ್ಲಾ ಬೆಲೆಯನ್ನು ನಾನು ಮತ್ತು ಪಂಚರು ಅಂದಾಜು ಮೌಲ್ಯ ಮಾಡಿರುತ್ತೇವೆ. ಆ ವಸ್ತುಗಳ ಮಾಲೀಕರಲ್ಲಿ ನಾನು ಆ ವಸ್ತುಗಳನ್ನು ಯಾವಾಗ ಖರೀದಿ ಮಾಡಿದ್ದೆಂದು ವಿಚಾರ ಮಾಡಿರುತ್ತೇನೆ. ಆರೋಪಿತರನ್ನು ಕೇಳಿ ಮೌಲ್ಯಮಾಪನ ಮಾಡಿರುತ್ತೇನೆ ಎಂದು ಪಂಚನಾಮೆಯಲ್ಲಿ ಕಾಣಿಸಿಲ್ಲ. ಆರೊಪಿತರಲ್ಲಿ ವಿಚಾರಿಸಿದರೆ ಅವುಗಳ ಮೌಲ್ಯ

ಕಡಿಮೆ ಇರುತ್ತದೆಂದು ತಿಳಿದುಬರುತ್ತಿತ್ತು ಆದರೆ ಉದ್ದೇಶಪೂರ್ವಕವಾಗಿ ಹೆಚ್ಚು ಮೌಲ್ಯ ಕಾಣಿಸುವ ಸಲುವಾಗಿ ಅವರಲ್ಲಿ ವಿಚಾರ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚರು ವಸ್ತುಗಳ ಮೌಲ್ಯ ನಿರ್ಧರಿಸಲು ಯಾವ ಪರಿಣಿತಿ ಪಡೆದಿದ್ದಾರೆ ಎಂದು ನಾನು ಪಂಚರ ಹೇಳಿಕೆ ಪಡೆದಿಲ್ಲ. ಸಾಕ್ಷಿ ಮುಂದುವರೆದು ಎಲ್ಲವನ್ನು ಅಂದಾಜಿನಲ್ಲಿ ಮೌಲ್ಯಮಾಪನ ಮಾಡಿರುತ್ತೇನೆ, ನಂತರ ಸಂಬಂಧಪಟ್ಟವರಿಂದ ಮಾಹಿತಿ ಪಡೆದಿರುತ್ತೇನೆ ಎನ್ನುತ್ತಾರೆ. ಪಂಚನಾಮೆ ಕಾಲದಲ್ಲಿ ಕಂಡುಬಂದ ಮರದ ವಸ್ತುಗಳು, ಎಲೆಕ್ಟ್ರಾನಿಕ್ ವಸ್ತುಗಳು ಇತ್ಯಾದಿಯ ಬಗ್ಗೆ ತನಿಖಾ ಕಾಲದಲ್ಲಿ ಅದಕ್ಕೆ ಸಂಬಂಧಿಸಿದ ಪರಿಣಿತರಿಂದ ಮೌಲ್ಯಮಾಪನ ಮಾಡಿಸಿಲ್ಲ.

5.ನಾನೇ ಅಭಿಯೋಜನಾ ಮಂಜೂರಾತಿಯನ್ನು ಸ್ವೀಕರಿಸಿರುತ್ತೇನೆ. ಅದನ್ನು ನೀಡುವಂತೆ ಕೋರಿ ಮನವಿಯನ್ನು ನಾನೇ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿಪಿ-166 ಉಲ್ಲೇಖದ ಕ್ರಮಸಂಖ್ಯೆ 3 ರಲ್ಲಿ ತನಿಖಾ ದಾಖಲೆಗಳಾದ ಪಿರ್ಯಾದು, ಪ್ರ.ವ.ವ, ಪ್ರಾಯೋಗಿಕ ಪಂಚನಾಮೆಎ, ವಸ್ತುಪಟ್ಟಿ ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳೆಂದು ಕಾಣಿಸಿರುತ್ತಾರೆ. ಈ ಪ್ರಕರಣದಲ್ಲಿ ಆ ದಾಖಲೆಗಳು ಇದ್ದವಾ ಎಂದರೆ ಸಾಕ್ಷಿಯು ಅಲ್ಲಿ ಕೆಲವು ತಪ್ಪಾಗಿ ನಮೂದು ಮಾಡಿರುತ್ತಾರೆ ಪ್ರಸ್ತಾವನೆಯಲ್ಲಿ ಅದನ್ನು ಸರಿಪಡಿಸಿರುತ್ತಾರೆ ಎನ್ನುತ್ತಾರೆ. ಪ್ರಸ್ತಾವನೆಯಲ್ಲಿ ಕ್ರಮಸಂಖ್ಯೆ 1 ರಲ್ಲಿ ಸೋರ್ಸ್ ವರದಿ ತಯಾರಿಸಿದ್ದು ನರಸಿಂಹಮೂರ್ತಿ ಟಿ ಎನ್ ಎಂದು ಕಾಣಿಸಿದೆ ಎಂದರೆ ಸರಿ. ನಾನು ಸೋರ್ಸ್ ವರದಿ ತಯಾರಿಸಿಲ್ಲ, ಹಾಗೂ ಸೋರ್ಸ್ ವರದಿಯ ದಿನಾಂಕ ಅದರಲ್ಲಿ ಕಾಣಿಸಿದಂತೆ 6-2-15 ಅಲ್ಲ ಎಂದರೆ ಸರಿ. ಹಾಗೆಯೇ ಕ್ರಮಸಂಖ್ಯೆ 2 ರಲ್ಲಿ ತನಿಖಾಧಿಕಾರಿಯ ಅಂತಿಮ ವರದಿಯ ದಿನಾಂಕ 23-2-15 ಎಂದು ಕಾಣಿಸಿದ್ದು ಆ ದಿನಾಂಕಕ್ಕೆ ಅಂತಿಮ ವರದಿ ಸಲ್ಲಿಸಿದ್ದಲ್ಲ ಎಂದರೆ ಸರಿ. ನಿಪಿ-166ರಲ್ಲಿ ಈ ಎಲ್ಲಾ ಲೋಪಗಳು ಇದ್ದ ಕಾರಣ ನಾನು ತಿದ್ದುಪಡಿ ಮಂಜೂರಾತಿಯನ್ನು ಪಡೆದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆದೇಶದಲ್ಲಿ ಅಭಿಯೋಜನಾ ಮಂಜೂರಾತಿ ಕೊಟ್ಟಿರುವುದರಿಂದ ಅದರಂತೆ ಮುಂದುವರೆದಿರುತ್ತೇನೆ ಎನ್ನುತ್ತಾರೆ. ನನಗೆ ದೋ.ಪಟ್ಟಿ ಸಲ್ಲಿಸುವ ಅಧಿಕಾರವೇ ಇರಲಿಲ್ಲ ಕಾನುನುಬದ್ಧವಲ್ಲದ ಅಭಿಯೋಜನಾ ಮಂಜೂರಾತಿ ಆಧಾರದಲ್ಲಿ ನಾನು ದೋ.ಪಟ್ಟಿ ಸಲ್ಲಿಸಿದ್ದು ಎಂದರೆ ಸರಿಯಲ್ಲ.

6.ತನಿಖಾ ಕಾಲದಲ್ಲಿ ಆರೋಪಿತರಿಂದ ಅನುಬಂಧ 1 ರಿಂದ 23 ನ್ನು ಪಡೆದುಕೊಳ್ಳಬೇಕೆಂದರೆ ಸರಿ. ಆ ಅನುಬಂಧ ಕೇವಲ ಮಾಹಿತಿಗೋಸ್ಕರ ಎಂದರೆ ಸರಿ. ನನ್ನ ತನಿಖೆ ಮುಕ್ತಾಯಗೊಂಡ ನಂತರ

ನಾನು ಅಂತಿಮ ವರದಿ ತಯಾರಿಸುವುದಕ್ಕಿಂತ ಮೊದಲು ಆರೋಪಿತರ ಮೇಲೆ ಆಸ್ತಿಗಿಂತ ಹೆಚ್ಚಿನ ಆದಾಯ ಹೊಂದಿದ್ದಾರೆ ಎನ್ನುವ ಅಭಿಪ್ರಾಯಕ್ಕೆ ಸಂಬಂಧಿಸಿದಂತೆ ಅವರಿಂದ ಅದಕ್ಕೆ ಸಂಬಂಧಿಸಿದ ಲೆಕ್ಕಾಚಾರ ಕೊಡಿ ಎಂದು ಕೇಳಲಿಲ್ಲ. ಸಾಕ್ಷಿಯು ಮುಂದುವರೆದು ಅನುಬಂಧ 1 ರಿಂದ 23 ನ್ನು ಪಡೆದು ಪರಿಶೀಲಿಸಿರುವುದು ಎನ್ನುತ್ತಾರೆ. ಅನುಬಂಧ- 1 ರಿಂದ 3 ಕೇವಲ ಮಾಹಿತಿಗಾಗಿ ಮಾತ್ರ ಆದ್ದರಿಂದ ನಾನು ಕ್ರಮಬದ್ಧವಾದ ಲೆಕ್ಕಾಚಾರವನ್ನು ಆರೋಪಿತರಿಂದ ಅಂತಿಮ ವರದಿ ತಯಾರಿಸುವುದಕ್ಕಿಂತ ಮೊದಲು ಕೇಳಬೇಕಾಗಿತ್ತು ಎಂದರೆ ಸರಿಯಲ್ಲ. ಭ್ರ.ನಿ.ಕಾಯಿದೆ ಕಲಂ 13(1)(ಎ) ಅನ್ವಯ ದೋ.ಪಟ್ಟಿ ಸಲ್ಲಿಸಬೇಕಾದರೆ ಆರೋಪಿತರಿಂದ ಕ್ರಮಬದ್ಧವಾದ ಲೆಕ್ಕಾಚಾರವನ್ನು ಕೇಳಲೇಬೇಕಾಗಿತ್ತು, ಅದನ್ನು ಕೇಳದೇ ಇರುವುದರಿಂದ ನಾನು ಸಲ್ಲಿಸಿರುವ ದೋ.ಪಟ್ಟಿಕ್ರಮಬದ್ಧವಾಗಿಲ್ಲ ಎಂದರೆ ಸರಿಯಲ್ಲ.

7.ಕಟ್ಟಡದ ಖರ್ಚುವೆಚ್ಚವನ್ನು ಆಸ್ತಿ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾದರೆ ಕಟ್ಟಡ ಕಟ್ಟುವಾಗ ಎಷ್ಟು ಖರ್ಚಾಗಿತ್ತು ಎನ್ನುವುದನ್ನು ಪರಿಗಣಿಸಬೇಕು ಎಂದರೆ ಸರಿ. ನಿಪಿ-58ರಲ್ಲಿ ಕಟ್ಟಡದ ಖರ್ಚುವೆಚ್ಚ ಕಾಣಿಸಿಲ್ಲ ಮೌಲ್ಯಮಾಪನ ಕಾಣಿಸಿರುವುದು ಆದ್ದರಿಂದ ನಾನು ಕಟ್ಟಡದ ನಿರ್ಮಾಣವೆಚ್ಚದ ವರದಿ ಪಡೆದಿಲ್ಲ ಮೌಲ್ಯಮಾಪನ ವರದಿ ಪಡೆದಿರುವುದು ಎಂದರೆ ಸರಿಯಲ್ಲ. ನಿಪಿ-58ರಲ್ಲಿ ಆ ಕಟ್ಟಡವನ್ನು ಕಟ್ಟಿದ ಸಮಯದ ಎಸ್ ಆರ್ ವರದಿಯಂತೆ ಮೌಲ್ಯಮಾಪನ ಮಾಡಿರುವುದು ಎಂದು ಕಾಣಿಸಿಲ್ಲ ಎಂದರೆ ಸಾಕ್ಷಿಯು ಕಾಣಿಸಿಲ್ಲ ಎನ್ನುವುದು ನಿಜ ಆದರೆ ಅದೇ ರೀತಿ ಮಾಡಿರುತ್ತಾರೆ ಎನ್ನುತ್ತಾರೆ. ಎಸ್.ಆರ್ ದರದಂತೆ ಮೌಲ್ಯಮಾಪನ ಮಾಡಿಲ್ಲ ಎಂದರೆ ಸರಿಯಲ್ಲ. ಕಟ್ಟಡದ ನಿರ್ಮಾಣವೆಚ್ಚವನ್ನು ಎಸ್.ಆರ್ ದರದಂತೆ ಮಾಡಿಲ್ಲ ಮತ್ತು ನಾನು ಅವರಿಂದ ಕಟ್ಟಡದ ಮೌಲ್ಯಮಾಪನ ವರದಿಯನ್ನು ಪಡೆದುಕೊಂಡಿರುವುದು ಎಂದರೆ ಸರಿಯಲ್ಲ.

8.ನಿಪಿ-59 ರ ವರದಿ ಆ ಮನೆಯನ್ನು ಆರೋಪಿತರು ಖರೀದಿಸುವುದಕ್ಕಿಂತ ಮೊದಲೇ ಅಲ್ಲಿ ಕಟ್ಟಡ ಇದ್ದುದರಿಂದ ಆ ವರದಿಯನ್ನು ನಾನು ಈ ಪ್ರಕರಣದಲ್ಲಿ ಪರಿಗಣಿಸಿಲ್ಲ ಎಂದರೆ ಸರಿ. ನಿಪಿ-169ರ ಪುಟ ಸಂಖ್ಯೆ 175 ರಿಂದ 180ರಲ್ಲಿ ಆರೋಪಿತರು ದಿನಾಂಕ 26-12-11 ರಂದು ಆ ಕಟ್ಟಡದ ಖರ್ಚುವೆಚ್ಚದ ಅಂದಾಜು ಪಟ್ಟಿಯ ದಾಖಲೆಯನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿ. ಈ ದಾಖಲೆಯನ್ನು ನೀಡಿದವರ ಹೇಳಿಕೆಯನ್ನು ನಾನು ಮಾಡಿಕೊಂಡಿಲ್ಲ. ಸಾಕ್ಷಿಯು ಪಿಡಬ್ಲ್ಯೂಡಿಯವರಿಂದ

ಮೌಲ್ಯಮಾಪನ ಪಡೆದಿದ್ದರಿಂದ ಅದರ ಅವಶ್ಯಕತೆ ಕಂಡುಬರಲಿಲ್ಲ ಎನ್ನುತ್ತಾರೆ. ಸಾಕ್ಷಿಗೆ ತೋರಿಸಿದ ಈ ದಾಖಲೆಯನ್ನು **ನಿಪಿ-169(9)** ಎಂದು ಗುರುತಿಸಲಾಯಿತು. ಇದರಲ್ಲಿ ಕಾಣಿಸಿದ ಮೌಲ್ಯಮಾಪನ ಸರಿಯಾಗಿದೆಯೋ ಇಲ್ಲವೋ ಎಂದು ನಾನು ಪಿಡಬ್ಲ್ಯೂಡಿಯವರ ಮೂಲಕ ಪರಿಶೀಲನೆ ಮಾಡಿಸಿಲ್ಲ. ಈ ದಾಖಲೆಯನ್ನು ಒಪ್ಪಬಹುದೋ ಇಲ್ಲವೋ ಎಂಬ ಬಗ್ಗೆ ನಾನು ನನ್ನ ತನಿಖಾ ವರದಿಯಲ್ಲಿ ನನ್ನ ಅಭಿಪ್ರಾಯ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-169(9)ನ್ನು ನೀಡಿರುವವರು ಅಧಿಕೃತ ಚಾರ್ಟರ್ಡ್ ಇಂಜಿನಿಯರ್ ಮತ್ತು ವ್ಯಾಲ್ಯೂವರ್ ಎಂದರೆ ಇರಬಹುದು.

9.ಆರೋಪಿತರು ಮನೆಯನ್ನು ನಿರ್ಮಾಣ ಮಾಡಲು ಬ್ಯಾಂಕಿನಿಂದ ಸಾಲ ಪಡೆದುಕೊಂಡಿದ್ದರು ಎನ್ನುವುದು ನಿಪಿ-71 ರಿಂದ 74 ರಲ್ಲಿ ಕಂಡುಬರುತ್ತದೆ ಎಂದರೆ ಸರಿ. ಸಾಲ ಮಂಜೂರಾತಿ ಮಾಡುವುದಕ್ಕಿಂತ ಮೊದಲು ಮತ್ತು ಕಟ್ಟಡ ನಿರ್ಮಾಣ ಆದ ನಂತರ ಬ್ಯಾಂಕಿನವರು ಮಾಡಿದ ಮೌಲ್ಯಮಾಪನದ ವರದಿಯನ್ನು ನಾನು ಪಡೆದುಕೊಂಡಿಲ್ಲ. ನಾನು ಬ್ಯಾಂಕಿನವರ ಆ ವರದಿಯನ್ನು ಪಡೆದುಕೊಂಡು ಮತ್ತು ನಿಪಿ-169(9ನ್ನು ಪರಿಗಣಿಸಿ ತನಿಖೆ ನಡೆಸಿದ್ದರೆ ಆರೋಪಿತರ ಆಸ್ತಿಯ ಮೌಲ್ಯ ಕಡಿಮೆಯಾಗುತ್ತದೆ ಎಂದು ನಾನು ಅವೆರಡನ್ನೂ ಪರಿಶೀಲಿಸದೆ ನಿಪಿ-58ನ್ನು ಪರಿಗಣಿಸಿ ಆರೋಪಿತರ ಆಸ್ತಿಗೆ ನಿಪಿ-58ರಲ್ಲಿ ಕಾಣಿಸಿದ ಹಣವನ್ನು ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಆ ಕಟ್ಟಡವನ್ನು ನಿರ್ಮಾಣ ಮಾಡಲು ಖರ್ಚು ಮಾಡಿದ ಹಣ 33ಲಕ್ಷ ರೂಪಾಯಿ ಆಗಿದ್ದರೂ ಕೂಡ ನಾನು ನಿಪಿ-58ನ್ನು ಆಧರಿಸಿ ಕಟ್ಟಡದ ನಿರ್ಮಾಣವೆಚ್ಚ 38,75,324 ಎಂದು ಪರಿಗಣಿಸಿದ್ದೇನೆ ಎನ್ನುವುದು ಸರಿಯಲ್ಲ.

10.ಆರೋಪಿತರು ಸಿವಿಲ್ ಇಂಜಿನಿಯರ್ ಎಂದರೆ ಸರಿ. ನಾನು ಪಿಡಬ್ಲ್ಯೂಡಿ ವರದಿ ಪಡೆದುಕೊಳ್ಳುವುದಕ್ಕಿಂತ ಪೂರ್ವದಲ್ಲಿ ಆರೋಪಿತರ ವಿದ್ಯಾರ್ಹತೆ ಸಿವಿಲ್ ಇಂಜಿನಿಯರ್ ಎಂಬುದನ್ನು ಅವರಿಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಕಟ್ಟಡ ನಿರ್ಮಾಣವೆಚ್ಚವನ್ನು ಪಡೆದುಕೊಂಡು ಪರಿಗಣಿಸಬೇಕಾಗಿತ್ತು ಬದಲಾಗಿ ಆರೋಪಿತರ ಆಸ್ತಿಯ ಮೌಲ್ಯ ಹೆಚ್ಚು ಕಾಣಿಸುವ ಉದ್ದೇಶದಿಂದ ಕಟ್ಟಡದ ಮೌಲ್ಯಮಾಪನ ವರದಿಯನ್ನು ನಿಪಿ-58ರಂತೆ ಪಡೆದುಕೊಂಡದ್ದು ಎಂದರೆ ಸರಿಯಲ್ಲ.

11.ನಾನು ಆರೋಪಿತರ ಲಾಸ್ಟ್ ಬ್ಯಾಂಕ್ ಬ್ಯಾಲೆನ್ಸ್ ಪರಿಗಣಿಸುವಾಗ ಬಡ್ಡಿಯನ್ನು ಕಳೆದು ಪರಿಗಣಿಸಿರುವುದು ಎಂದರೆ ಸರಿ.

12.ಎಲೆಕ್ಟ್ರಿಸಿಟಿ ಡೆಪಾಸಿಟ್ ನ್ನು ಮಾತ್ರ ನಾನು ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುವುದು ಎಂದರೆ ಸರಿ.

13.ನಿಪಿ-15 ರ ಪುಟಸಂಖ್ಯೆ 12 ಮತ್ತು 13 ರಲ್ಲಿ ಕಾಣಿಸಿರುವ ಬಂಗಾರದ ಒಡವೆಗಳಲ್ಲಿ ಬಹಳಷ್ಟು ಹರಳಿನಿಂದ ಕೂಡಿದ ಒಡವೆಗಳು ಇದ್ದವು ಎಂದರೆ ಸರಿ. ಆ ಹರಳುಗಳ ಬೆಲೆ ಮತ್ತು ಚಿನ್ನದ ಬೆಲೆಯನ್ನು ಅಕ್ಕಸಾಲಿಗರಿಂದ ಪ್ರತ್ಯೇಕವಾಗಿ ಮಾಡಿಸಿಲ್ಲ. ಹರಳುಗಳ ಮತ್ತು ಬಂಗಾರದ ಬೆಲೆ ಬೇರೆ ಬೇರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವೆಲ್ಲವನ್ನು ಪರಿಗಣಿಸಿ ಬಂಗಾರದ ಬೆಲೆಯನ್ನು ಕಾಣಿಸಿರುವುದು ಎನ್ನುತ್ತಾರೆ. ಆ ಒಡವೆಗಳ ಒಟ್ಟು ತೂಕದ ಆಧಾರದಲ್ಲಿ ಮೌಲ್ಯಮಾಪನ ಮಾಡಿರುತ್ತೇನೆಯೇ ವಿನಃ ಬಂಗಾರ ಮತ್ತು ಹರಳುಗಳ ಪ್ರತ್ಯೇಕ ಮೌಲ್ಯಮಾಪನ ಮಾಡಿಲ್ಲ ಎಂದರೆ ಸಾಕ್ಷಿಯು ಪಂಚನಾಮೆಯಲ್ಲಿ ನಮೂದಿಸಿಲ್ಲ, ಆದರೆ ಮಾಡಿಸಿದ್ದೇನೆ ಎನ್ನುತ್ತಾರೆ. ಆರೋಪಿತರು ನಿಪಿ-167ರ ಪುಟ 50ರಲ್ಲಿ ಅನುಬಂಧ 14 ರಲ್ಲಿ ಈ ಚಿನ್ನದ ಒಡವೆಗಳು ಅವರ ಸ್ವಾಧೀನಕ್ಕೆ ಹೇಗೆ ಬಂದವು ಎನ್ನುವ ಬಗ್ಗೆ ವಿವರಣೆಯನ್ನು ಕಾಣಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ತೋರಿಸಿದ ಈ ಭಾಗವನ್ನು **ನಿಪಿ-167(1)** ಎಂದು ಗುರುತಿಸಲಾಯಿತು. ಅಂತಿಮ ವರದಿಯಲ್ಲಿ ಈ ವಿವರಣೆಯನ್ನು ನಾನು ಏಕೆ ಒಪ್ಪಿಕೊಂಡಿಲ್ಲ ಎನ್ನುವ ಬಗ್ಗೆ ಅಭಿಪ್ರಾಯ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಅದಕ್ಕೆ ಪೂರಕವಾದ ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ ಒಪ್ಪಿಕೊಂಡಿಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಎ ಬಿ ಸಿ ಡಿ ಅಂಕಿಅಂಶದಲ್ಲಿ ಕಾಣಿಸಿದ್ದೇನೆ ಎನ್ನುತ್ತಾರೆ. ನಿಪಿ-167(1)ನ್ನು ಏಕೆ ಒಪ್ಪಲಿಲ್ಲ ಎನ್ನುವ ಬಗ್ಗೆ ದೋ,ಪಟ್ಟಿಯೊಂದಿಗೆ ಸಲ್ಲಿಸಿದ ಯಾವುದೇ ದಾಖಲೆಯಲ್ಲು ಚರ್ಚೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಅಂತಿಮ ವರದಿಯ ಪುಟ 46 ರಲ್ಲಿ ಆ ಬಗ್ಗೆ ಚರ್ಚೆ ಮಾಡಿಲ್ಲ ಎಂದರೆ ಸಾಕ್ಷಿಯು ಆ ರೀತಿಯಾಗಿ ಸ್ಪಷ್ಟವಾಗಿ ಬರೆದಿಲ್ಲ ಆದರೆ ಯಾವುದನ್ನು ಪರಿಗಣಿಸಿದ್ದೇನೆ ಯಾವುದನ್ನು ಪರಿಗಣಿಸಿಲ್ಲ ಎಂದು ಕಾಣಿಸಿದ್ದೇನೆ ಎನ್ನುತ್ತಾರೆ. ಅವರು ಕೊಟ್ಟ ಈ ವಿವರಣೆಯ ಬಗ್ಗೆ ಚರ್ಚೆ ಮಾಡಿಲು ನನಗೆ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಅವರು ಪೂರಕ ದಾಖಲೆ ಕೊಡದೇ ಇದ್ದುದರಿಂದ ಚರ್ಚೆ ಮಾಡಿಲ್ಲ ಎನ್ನುತ್ತಾರೆ.

14.ಚಿನ್ನಾಭರಣಗಳ ಮೌಲ್ಯವನ್ನು ದಾಳಿಯ ದಿನಾಂಕಕ್ಕೆ ಏನು ಮೌಲ್ಯ ಇತ್ತೋ ಅದರಂತೆ ಮಾಡಿಸಿದ್ದೇನೆ ಎಂದರೆ ಸರಿ. ಚಿನ್ನದ ಬೆಲೆ ವರ್ಷ ವರ್ಷ ಏರುಪೇರಾಗುತ್ತದೆ ಎಂದರೆ ನಿಜ. ಆ ಚಿನ್ನಾಭರಣಗಳಲ್ಲಿ ಯಾವ ಚಿನ್ನಾಭರಣವನ್ನು ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತಾರೆ ಆಗಿನ ಬೆಲೆ ಏನಿತ್ತು ಎಂದು ಕಾಣಿಸಿಲ್ಲ ಎಂದರೆ ಸರಿ. ನಿಪಿ-167(1)ರಲ್ಲಿ ಆರೋಪಿತರು ಮನೆಯ ಶೋಧನೆ ಕಾಲದಲ್ಲಿ ಸಿಕ್ಕಿರುವ ಒಡವೆಗಳಲ್ಲಿ ಸುಮಾರು 73 ಗ್ರಾಂ ಅವರ ಚಿಕ್ಕಪ್ಪನ ಮಗಳು ಮಧುರವರಿಗೆ ಸೇರಿದ್ದೆಂದು ಕಾಣಿಸಿರುತ್ತಾರ ಎಂದರೆ ಸರಿ. ನಾನು ಈ ಬಗ್ಗೆ ಮಧುರವರ ಹೇಳಿಕೆ ಮಾಡಿಕೊಂಡಿಲ್ಲ.

15.ನಿಪಿ-169ರಲ್ಲಿ ಆರೋಪಿತರು ಮಲಬಾರ್ ಗೋಲ್ಡ್ ರವರ ಟ್ಯಾಕ್ಸ್ ಇನ್ವಾಯ್ಸು ನ್ನು ಮಧುರವರಿಗೆ ಸಂಬಂಧಿಸಿದಂತೆ ಹಾಜರುಪಡಿಸಿರುತ್ತಾರೆ ಎಂದರೆ ಸರಿ. ಈ ದಾಖಲೆಯನ್ನು **ನಿಪಿ-169(10)** ಎಂದು ಗುರುತಿಸಲಾಯಿತು. ಸಾಕ್ಷಿಯು ಇದರಲ್ಲಿ ಕಾಣಿಸಿದ ಚಿನ್ನ 167(1) ರಲ್ಲಿ ಕಾಣಿಸಿದ 73 ಗ್ರಾಂ ಗೆ ಸಂಬಂಧಿಸಿದ್ದು ಎಂದು ಕಂಡುಬರಲಿಲ್ಲ ಎನ್ನುತ್ತಾರೆ. ಈ ವಿಚಾರವನ್ನು ನಾನು ಅಂತಿಮ ವರದಿಯಲ್ಲಿ ಎಲ್ಲೂ ಚರ್ಚಿಸಿಲ್ಲ ಮತ್ತು ಕಾಣಿಸಿಲ್ಲ. ಆ ರೀತಿ ಅಭಿಪ್ರಾಯ ನೀಡಲು ನನಗೆ ಏನೂ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಎಲ್ಲಾ ಚಿನ್ನವನ್ನು ಸೇರಿಸಿ ಒಟ್ಟಾರೆ ಕೊಟ್ಟಿದ್ದೇನೆ ಎನ್ನುತ್ತಾರೆ. ಆ 73ಗ್ರಾಂ ಚಿನ್ನದ ಬೆಲೆಯನ್ನು ನಾನು ಆಸ್ತಿಯ ಲೆಕ್ಕದಲ್ಲಿ ಕಡಿತಗೊಳಿಸಿ ಹಾಕಬೇಕಾಗಿತ್ತು ಎಂದರೆ ಸರಿಯಲ್ಲ.

16.ಹಾಗೆಯೇ ನಿಪಿ-167(1)ರಲ್ಲಿ ಆರೋಪಿತರು ಲಾಕರ್ ನಲ್ಲಿ ದೊರೆತ ಒಡವೆಗಳು ಅವರ ಚಿಕ್ಕಮ್ಮ ರತ್ನ ಇವರು ಅಮೇರಿಕದಲ್ಲಿರುವ ಅವರ ಮಗಳು ಹೇಮಾರನ್ನು ನೋಡಲು ಹೋದ ಸಂದರ್ಭದಲ್ಲಿ ಸುರಕ್ಷತೆಯ ದೃಷ್ಟಿಯಿಂದ ತಮ್ಮ ಮನೆಯಲ್ಲಿ ಇಟ್ಟುಕೊಳ್ಳಲು ಕೊಟ್ಟುಹೋಗಿದ್ದು ಎಂದು ಕಾಣಿಸಿದ್ದಾರೆ ಎಂದರೆ ಸರಿ. ನಿಪಿ-169ರ ಪುಟ 276ರಿಂದ 284ರವರೆಗೆ ದಾಖಲೆಗಳನ್ನು ಆರೋಪಿತರು ಅವರ ಚಿಕ್ಕಮ್ಮ ರತ್ನ ಮತ್ತು ಅವರ ಗಂಡ ಅಮೇರಿಕಕ್ಕೆ ಹೋಗಿರುವ ಬಗ್ಗೆ ಹಾಜರುಪಡಿಸಿದ್ದು ಎಂದರೆ ಸರಿ. ಈ ಬಗ್ಗೆ ನಾನು ರತ್ನ ಮತ್ತು ಅವರ ಗಂಡನ ಹೇಳಿಕೆ ಮಾಡಿಕೊಂಡಿಲ್ಲ. ಈ ದಾಖಲೆಗಳನ್ನು ಕೂಡ ನಾನು ಯಾಕೆ ಒಪ್ಪಿಕೊಂಡಿಲ್ಲ ಎಂದು ಅಂತಿಮ ವರದಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಒಟ್ಟಾರೆ ಚಿನ್ನದ ಬಗ್ಗೆ ಅಭಿಪ್ರಾಯ ನೀಡಿರುತ್ತೇನೆ ಎನ್ನುತ್ತಾರೆ. ಅದು ಒಟ್ಟು 125.03ಗ್ರಾಂ ಚಿನ್ನವನ್ನು

ನಾನು ಕಳೆದು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಬೇಕಾಗಿತ್ತು ಎಂದರೆ ಸರಿಯಲ್ಲ. ಆರೋಪಿತರ ಆಸ್ತಿಯ ಲೆಕ್ಕವನ್ನು ಜಾಸ್ತಿ ತೋರಿಸುವ ಸಲುವಾಗಿ ನಾನು ಅವರು ಹಾಜರುಪಡಿಸಿದ ದಾಖಲೆಗಳನು ಕಡೆಗಣಿಸಿ ಅವರ ಆಸ್ತಿಯ ಲೆಕ್ಕಕ್ಕೆ ಹೆಚ್ಚು ಚಿನ್ನ ಪರಿಗಣಿಸಿರುತ್ತೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಕಲಾಪದ ವೇಳೆ ಮುಗಿದಿದ್ದರಿಂದ ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್

ನ್ಯಾಯಾಧೀಶರು, ಹಾಸನ.